ಮೂಲಕ ತಾವೇ ಪಡೆದುಕೊಳ್ಳುತ್ತಾರೆ.

◆ **ನಿಮ್ಮನ್ನು ನೀವು ಕವಿ ಅಥವಾ ಬರಹಗಾರ್ತಿಯಾಗಿ ಗುರುತಿಸಿಕೊಂಡ ಆರಂಭದ ದಿನಗಳನ್ನು ನೆನಪಿಸಿಕೊಳ್ಳಿ. ಆ ಸೃಷ್ಟಿಶೀಲ ದಿನಗಳ ನಿಮ್ಮ ಮನೋಬಿಕ್ಕಟ್ಟು ಹೇಗಿತ್ತು?**

ನನ್ನ ಬರಹ ಆಳವಾದ ಭಾವನೆ, ಖಾಸಗಿ ಅನುಭವ ಮತ್ತು ಪ್ರಕೃತಿಯ ಅವಲೋಕನದ ಮಿಶ್ರಣ ಎನ್ನಬಹುದು. ಪ್ರೀತಿಯ ಹಂಬಲ ನನ್ನ ಕವಿತೆಗಳಲ್ಲಿ ಸದಾ ಪ್ರಬಲವಾಗಿದೆ. ಕುಟುಂಬದ ಪ್ರೋತ್ಸಾಹ ದೊರಕಿದ್ದು ನನ್ನ ಬರವಣಿಗೆಯ ನೈತಿಕ ಶಕ್ತಿಯಾಯ್ತು. ಆದರೆ, ತಾಯಿಯಾಗಿ ಮತ್ತು ಹೊರಗೆ ದುಡಿಯುವ ಮಹಿಳೆಯಾಗಿ ನನಗೆ ಸಮಯದ ಅಭಾವ ದೊಡ್ಡ ಅಡೆತಡೆಯಾಗಿದೆ. ಕೆಲವೊಮ್ಮೆ ನನ್ನೊಳಗಿನ ಆಲೋಚನೆಗಳನ್ನು ತಕ್ಷಣ ಬರವಣಿಗೆಗೆ ತರುವುದಕ್ಕೆ ಸಾಧ್ಯವಾಗದೇ ನಿರಾಸೆಯುಂಟಾಗುತ್ತದೆ. ಆದರೂ ಬರೆಯುವ ಹಂಬಲವೇ ನನಗೆ ಶಕ್ತಿ ತುಂಬುತ್ತದೆ.

◆ **ಇತಿಹಾಸದಲ್ಲಿ ಅರಬ್– ಯಹೂದಿ ವೈವಾಹಿಕ ಸಂಬಂಧಗಳು ಹಾಗೂ ಅಂತರಧರ್ಮೀಯ ಪ್ರೇಮಕಥೆಗಳು ಜರುಗಿರಬಹುದು. ಮತ್ತೀಗಲೂ ನಡೆಯುತ್ತಿರಬಹುದು. ಮನುಷ್ಯರೆಂದ ಮೇಲೆ ಅವೆಲ್ಲಾ ಸಹಜವೇ. ಅಂತಹ ಸ್ಫೂರ್ತಿದಾಯಕ ಕಥೆಗಳನ್ನು ಹಂಚಿಕೊಳ್ಳುವಿರಾ?**

ಇದರ ಬಗ್ಗೆ ಏನು ಹೇಳಲಿ? ನಮ್ಮ ಕವಿ ಮಹಮೂದ್ ದಾರ್ವೇಷ್ ಅವರ ಪ್ರಸಿದ್ಧ ಕವಿತೆ 'Rita and the Rifle' ನಿಮಗೆ ಗೊತ್ತಲ್ಲ? ಅರಬ್ ಮತ್ತು ಯಹೂದಿಗಳ ನಡುವೆ ಇದ್ದ ಪಾರಂಪರಿಕ ಸ್ನೇಹವನ್ನು ಈ ಯುದ್ಧ ಕೊಂದುಹಾಕಿತು. ಸ್ನೇಹಿತರಾಗಿ ಒಬ್ಬರನ್ನೊಬ್ಬರು ಬೆನ್ನುತಟ್ಟುವ ಕನಿಷ್ಠ ಸಂಬಂಧವನ್ನಾದರೂ ಉಳಿಸಿಕೊಳ್ಳ ಬಹುದಿತ್ತು. ಆದರೆ ಇಸ್ರೇಲ್ ಮಿಲಿಟರಿಯ ಕ್ರೌರ್ಯ, ಕುಟುಂಬಗಳ ನಡುವಿನ ಪ್ರತಿಯೊಂದು ಸಂಬಂಧವನ್ನು ಕಡಿದು ಹಾಕಲು ಪ್ರಯತ್ನಿಸಿತು. ಅವರು ಪ್ಯಾಲೆಸ್ಟೀನ್ ಅನ್ನು ಸಣ್ಣ ತುಂಡುಗಳನ್ನಾಗಿ ವಿಭಜಿಸಿ ರಕ್ತ ಸಂಬಂಧಿಗಳನ್ನು ಶಾಶ್ವತವಾಗಿ ಅಗಲಿಸಿ, ಪರಸ್ಪರ ಭೇಟಿ ಮಾಡಲು ಅಸಾಧ್ಯವಾಗುವಂತೆ ಮಾಡಿದರು. ಅವರು ತಂದೆ, ತಾಯಿ ಹಾಗೂ ಪ್ರೇಮಿಗಳನ್ನು ಕೊಂದು ಹಾಕಿದರು. ಹಾಗೆ ನೋಡಿದರೆ ಅರಬ್- ಯಹೂದಿಗಳ ನಡುವೆ ಸಹಜವಾದ ಮನುಷ್ಯ ಸಂಬಂಧವಿತ್ತು. ಮತ್ತೆ ಎರಡು ಜನಾಂಗಗಳ ನಡುವೆ ಆ ಸೌಹಾರ್ದ ಸಂಬಂಧ ಏರ್ಪಡಲೆಂದು ನಾನು ಆಶಿಸುತ್ತೇನೆ.

ಗಡಿಗಳಿಗೆ ಮಾನವರ ಹೃದಯ ಬಡಿತಗಳನ್ನು ತಡೆಯಲು ಸಾಧ್ಯವಿಲ್ಲ. ನನಗೆ ತಿಳಿದಿರುವ ಕೆಲವು ನೈಜ ಕಥೆಗಳನ್ನ ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ. ಬಹುಶಃ ಇವು ನಿಮ್ಮ ಕಿವಿಗೂ ಬಿದ್ದಿರಬಹುದು.

ಮಹಮೂದ್ ಮನ್ಸೂರ್ ಎಂಬ ಅರಬ್ ಯುವಕನು ಮಾಲ್ಕಾ ಎಂಬ ಯಹೂದಿ ಯುವತಿಯನ್ನು ಪ್ರೀತಿಸಿ ಮದುವೆಯಾದನು. ಐದು ವರ್ಷಗಳ ಪ್ರೀತಿಯ ನಂತರ ಅವರು ಧೈರ್ಯಮಾಡಿ ಮದುವೆಯಾದರು. ಮದುವೆಯ ಸಮಯದಲ್ಲಿ ತೀವ್ರ ವಿರೋಧ, ಕಟುಟೀಕೆ ಮತ್ತು ಸಾರ್ವಜನಿಕ ಬೆದರಿಕೆಗಳನ್ನು ಅವರು ಎದುರಿಸಬೇಕಾಯಿತು. ಕಡೆಗೆ ಸಾಮಾಜಿಕ ಬಹಿಷ್ಕಾರದಂತಹ ಒತ್ತಡಗಳನ್ನು ತಡೆಯಲಾಗದೇ ಬಲವಂತವಾಗಿ ಅವರು ದೂರವಾಗಬೇಕಾಯಿತು.

2018ರಲ್ಲಿ ಇಸ್ರೇಲ್‌ನಲ್ಲಿ ಲೂಸಿ ಅಹರಿಷ್ ಎಂಬ ಅರಬ್ ಮಹಿಳೆಯೊಬ್ಬರು ತ್ಸಾಹಿ ಹಾಲೇವಿ ಎಂಬ ಯಹೂದಿ ನಟನನ್ನು ಮದುವೆಯಾದರು. ಅವರ ಮದುವೆಯೂ ದೊಡ್ಡ ವಿವಾದವಾಯಿತು. ಆದರೆ ಲೂಸಿ ಹೇಳಿದ್ದೊಂದು ಮಾತು ನನ್ನ ಮನಸ್ಸಿನಲ್ಲಿ ಅಚ್ಚಾಗಿ ಕುಳಿತಿದೆ: 'ನಾನು ನನ್ನ ಹೃದಯವನ್ನು ಕೇಳಿದೆ. ಮತ್ತದು ಹೇಳಿತು ಪ್ರೀತಿ ಖಂಡಿತಾ ಪಾಪವಲ್ಲ!' ಎಂದು.

ಅಮಾನವೀಯ ಯುದ್ಧಗಳು, ರಾಜಕೀಯ ಗಡಿಗಳು ಮತ್ತು ಕುಟುಂಬದ ವಿರೋಧಗಳ ನಡುವೆಯೂ, ನೆಚ್ಚಿನ ಇಬ್ಬರು ಒಬ್ಬರನ್ನೊಬ್ಬರು ಆರಿಸಿಕೊಂಡಾಗ, ಅದು ನನಗೆ ಮಾನವೀಯತೆಯ ಗೆಲುವಿನಂತೆ ಕಾಣುತ್ತದೆ. ಆದರೆ ಸತ್ಯವೇನೆಂದರೆ, ಹೀಗೆ ಮದುವೆಯ ನೆಪದಲ್ಲಿ ಜೊತೆಯಾದವರು ತುಂಬಾ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಕುಟುಂಬಗಳಿಂದ ತಿರಸ್ಕಾರ, ಸಮಾಜದಿಂದ ಟೀಕೆ, ಕೆಲವೊಮ್ಮೆ ಜೀವಭಯವೂ ಸಹ.